ಡಾ॥ ರಾಜ್ ಅಧ್ಯಯನ ಪೀಠ

2461(2302); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ರಾಜ್ಯದಲ್ಲಿರುವ ವಿಶ್ವವಿದ್ಯಾಲಯಗಳ ಸಂಖ್ಯೆ ಎಷ್ಟು;

ಆ) ಇವುಗಳಲ್ಲಿರತಕ್ಕ ಅಧ್ಯಯನ ಪೀಠಗಳೆಷ್ಟು (ವಿಶ್ವವಿದ್ಯಾಲಯವಾರು ವಿವರ ನೀಡುವುದು);

ಇ) ಕನ್ನಡ ಚಲನಚಿತ್ರ ರಂಗದ ವರನಟ ಡಾ॥ ರಾಜ್‌ಕುಮಾರ್‌ರವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಯಾವುದಾದರು ವಿಶ್ವವಿದ್ಯಾಲಯದಲ್ಲಿ ಸ್ಥಾಪಿಸಲಾಗಿದೆಯೇ;

ಈ) ಇಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರದ ವತಿಯಿಂದ ಕ್ರಮ ಕೈಗೊಳ್ಳಲಾಗುತ್ತದೆಯೇ?

ಶ್ರೀ ಆರ್.ವಿ. ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು)

ಅ) ರಾಜ್ಯದಲ್ಲಿ 17 ವಿಶ್ವವಿದ್ಯಾಲಯಗಳಿವೆ.

ಆ) ಅಧ್ಯಯನ ಪೀಠಗಳ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕನ್ನಡ ವಿಶ್ವವಿದ್ಯಾಲಯ, ಹಂಪಿ ಇಲ್ಲಿ ವರನಟ ಡಾ॥ ರಾಜ್‌ಕುಮಾರ್‌ರವರ ಹೆಸರಿನಲ್ಲಿ ಅಧ್ಯಯನ ಪೀಠವನ್ನು ಸ್ಥಾಪಿಸಲಾಗಿದೆ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ

ಅನುಬಂಧ

ಕ್ರ ಸಂ.	ವಿಶ್ವವಿದ್ಯಾಲಯದ ಹೆಸರು	ಪೀಠಗಳ ವಿವರ
1	ಬೆಂಗಳೂರು ವಿಶ್ವವಿದ್ಯಾಲಯ	1. ಆಲಂಪಲ್ಲಿ ವೆಂಕಟರಮಣ ಅಧ್ಯಯನ ಪೀಠ 2. ಇಸ್ರೋ ಅಧ್ಯಯನ ಪೀಠ 3. ಕೆಂಪೇಗೌಡ ಅಧ್ಯಯನ ಪೀಠ
2	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	1. ಬಸವ ಪೀಠ 2. ಕನಕ ಪೀಠ 3. ವೇಮನ ಪೀಠ 4. ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಅಧ್ಯಯನ ಪೀಠ 5. ಟಿಪ್ಪುಸುಲ್ತಾನ್ ಅಧ್ಯಯನ ಪೀಠ 6. ಡಾ: ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠ 7. ಜೈನ ಪೀಠ 8. ಗಂಗೂಬಾಯಿ ಹಾನಗಲ್ ಅಧ್ಯಯನ ಪೀಠ 9. ವಿವೇಕಾನಂದ ಅಧ್ಯಯನ ಪೀಠ 10. ಕೆನರಾ ಬ್ಯಾಂಕ್ ಅಧ್ಯಯನ ಪೀಠ 11. ಬಿ.ಸಿ. ಪಾಟೀಲ ಚೇರ್ ಆಫ್ ಆರ್ಟ್ ಅಂಡ್ ಆರ್ಕಿಟೆಕ್ಚರ್ ಪೀಠ 12. ಡಾಕ್ಟರ್ ಹುಸೇನ್ ಪೀಠ
3	ಕನ್ನಡ ವಿಶ್ವವಿದ್ಯಾಲಯ, ಹಂಪಿ	1. ಮರಿದೇವರ ನಾಸರ ಅಧ್ಯಯನ ಪೀಠ 2. ಡಾ: ಶಂಭಾಜೋಷಿ ಅಧ್ಯಯನ ಪೀಠ 3. ಹೈದ್ರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಅಧ್ಯಯನ ಪೀಠ 4. ಜೈನ ಸಂಸ್ಕೃತಿ ಅಧ್ಯಯನ ಪೀಠ 5. ರಾಮಮನೋಹರ ಲೋಹಿಯಾ ಅಧ್ಯಯನ ಪೀಠ 6. ದಲಿತ ಅಧ್ಯಯನ ಪೀಠ 7. ನಾಡೋಜ ಡಾ: ರಾಜ್‌ಕುಮಾರ್ ಅಧ್ಯಯನ ಪೀಠ 8. ಹಾಲುಮತ ಅಧ್ಯಯನ ಪೀಠ 9. ದೇವರ ದಾಸೀಮಯ್ಯ ಅಧ್ಯಯನ ಪೀಠ 10. ವಾಲ್ಮೀಕಿ ಅಧ್ಯಯನ ಪೀಠ

4	ತುಮಕೂರು ವಿಶ್ವವಿದ್ಯಾಲಯ, ತುಮಕೂರು	ಕುಮಾರವ್ಯಾಸ ಅಧ್ಯಯನ ಪೀಠ
5	ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು	1. ರಾಷ್ಟ್ರಕವಿ ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ 2. ಮಹಾತ್ಮಾಗಾಂಧಿ ಅಧ್ಯಯನ ಪೀಠ 3. ಡಾ: ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠ 4. ನಾಲ್ವಡಿ ಕೃಷ್ಣರಾಜ ಒಡೆಯರ್ ಪೀಠ 5. ಸ್ವಾಮಿ ವಿವೇಕಾನಂದ ಪೀಠ 6. ಅಕ್ಕಮಹಾದೇವಿ ಪೀಠ 7. ಬಾಬು ಜಗಜೀವನರಾಯ್ ಪೀಠ 8. ಡಾ: ರಾಮ್ ಮೋಹನ್ ಲೋಹಿಯಾ ಪೀಠ 9. ಬಿ.ವಿ. ಕಾರಂತ್ ಪೀಠ
6	ಕುವೆಂಪು ವಿಶ್ವವಿದ್ಯಾಲಯ	1. ಡಾ: ಬಿ.ಆರ್. ಅಂಬೇಡ್ಕರ್ ಅಧ್ಯಯನ ಕೇಂದ್ರ ಮತ್ತು ಬೌದ್ಧ ಕೇಂದ್ರ 2. ಡಾ: ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠ 3. ಅಬ್ದುಲ್ ನಜೀರ್ ಸಾಬ್ ಅಧ್ಯಯನ ಪೀಠ 4. ಬಸವೇಶ್ವರ ಅಧ್ಯಯನ ಪೀಠ 5. ಕೆ.ಹೆಚ್. ಪಾಟೀಲ್ ಅಧ್ಯಯನ ಪೀಠ 6. ಶ್ರೀ ಶಾಂತವೇರಿ ಗೋಪಾಲಗೌಡ ಅಧ್ಯಯನ ಪೀಠ

7	ಮೈಸೂರು ವಿಶ್ವವಿದ್ಯಾಲಯ	1. ಸರ್ ಎಂ. ವಿಶ್ವೇಶ್ವರಯ್ಯ ಅಧ್ಯಯನ ಪೀಠ 2. ನಾಲ್ವಡಿ ಕೃಷ್ಣರಾಜ ಒಡೆಯರ್ ಅಧ್ಯಯನ ಪೀಠ 3. ಗುಬ್ಬಿ ವೀರಣ್ಣ ರಂಗ ಪೀಠ 4. ಕ್ರಿಶ್ಚಿಯಾನಿಟಿ ಅಧ್ಯಯನ ಪೀಠ 5. ಕುವೆಂಪು ಕಾವ್ಯಾಧ್ಯಯನ ಪೀಠ 6. ಶ್ರೀ ಬಸವ ಅಧ್ಯಯನ ಪೀಠ 7. ಡಿ. ದೇವರಾಜ ಅರಸ್ ಪೀಠ 8. ಡಾ: ಬಿ.ಆರ್. ಅಂಬೇಡ್ಕರ್ ಪೀಠ 9. ಸ್ವಾಮಿ ವಿವೇಕಾನಂದ ಪೀಠ 10. ಡಾ: ಜಾಕೀರ್ ಹುಸೇನ್ ಪೀಠ 11. ಪ್ಲಾನಿಂಗ್ ಕಮೀಷನ್ ಅಧ್ಯಯನ ಪೀಠ 12. ಡಾ: ಬಾಬು ಜಗಜೀವನರಾಂ ಪೀಠ 13. ಟಿಪ್ಪು ಸುಲ್ತಾನ್ ಪೀಠ 14. ಎಸ್.ಬಿ.ಎಂ. ಪೀಠ 15. ಮಲೇ ಮಹದೇಶ್ವರ ಪೀಠ
8	ಗುಲ್ಬರ್ಗ ವಿಶ್ವವಿದ್ಯಾಲಯ	1. ಬಸವಾದಿ ಶರಣ ಸಾಹಿತ್ಯ ಅಧ್ಯಯನ ಪೀಠ 2. ನಿಜಶರಣ ಅಂಬಿಗರ ಅಧ್ಯಯನ ಪೀಠ 3. ಹಡಪದ ಅಪ್ಪಣ್ಣ ಮತ್ತು ಹಡಪದ ಲಿಂಗಮ್ಮ ಅಧ್ಯಯನ ಪೀಠ 4. ಡಾ: ಬಿ.ಆರ್. ಅಂಬೇಡ್ಕರ್ ಅಧ್ಯಯನ ಪೀಠ 5. ಸಂತಶ್ರೀ ಸೇವಾಲಾಲ್ ಅಧ್ಯಯನ ಪೀಠ 6. ಶ್ರೀ ವಾಲ್ಮೀಕಿ ಅಧ್ಯಯನ ಪೀಠ
9	ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ	ಎಸ್.ವಿ.ಎಂ. ಅಧ್ಯಯನ ಪೀಠ
10	ಮಂಗಳೂರು ವಿಶ್ವವಿದ್ಯಾಲಯ	1. ಕ್ರಿಶ್ಚಿಯಾನಿಟಿ ಪೀಠ 2. ಎಸ್.ಜಿ. ಪಾವಂಜೆ ಪೀಠ 3. ಡಾ: ಕೆ. ಶಿವರಾಮ ಕಾರಂತ ಪೀಠ 4. ಗ್ರಾಮೀಣ ಬ್ಯಾಂಕಿಂಗ್ ಮತ್ತು ವ್ಯವಸ್ಥಾಪನ ಪೀಠ 5. ಎಂ.ಬಿ. ಶಾಸ್ತ್ರಿ ಆಯುರ್ವೇದ ಪೀಠ 6. ಧರ್ಮನಿಧಿ ಯೋಗ ಪೀಠ 7. ಧರ್ಮಸ್ಥಳ ಮಂಜುನಾಥೇಶ್ವರ ಕುಳು ಪೀಠ 8. ಕಾರ್ಪೊರೇಷನ್ ಬ್ಯಾಂಕ್ ಪೀಠ ಇನ್ ಬ್ಯಾಂಕ್ ಮ್ಯಾನೇಜ್‌ಮೆಂಟ್ 9. ಕೊಡವ ಸಾಂಸ್ಕೃತಿಕ ಅಧ್ಯಯನ ಪೀಠ 10. ಅಂಬಿಗರ ಚೌಡಯ್ಯ ಅಧ್ಯಯನ ಪೀಠ 11. ಜೈನ ಕವಿ ರತ್ನಾಕರವರ್ನೆ ಅಧ್ಯಯನ ಪೀಠ 12. ವಿಜಯಾ ಬ್ಯಾಂಕ್ ಪೀಠ 13. ಕನಕದಾಸ ಸಂಶೋಧನಾ ಕೇಂದ್ರ 14. ಡಾ: ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ